ಕವಿತೆ



ವಿಜಯಶ್ರೀ ಹಾಲಾಡಿ
ಕಲೆ: ರೂಪಶ್ರೀ ಕಲ್ಲಿಗನೂರು

# ಬೊಗಸೆಯಲ್ಲಿ ಬಿಕ್ಕುತ್ತಾಳೆ

ಬೆಕ್ಕು ನಾಯಿ ಮೊಲ
ಬಿಟ್ಟುಬಿಡು...
ಕೊನೆಗೆ ನಮ್ಮೂರ ಹಕ್ಕಿಗಳೂ
ನನ್ನ ಪ್ರೀತಿಸುತ್ತವೆ
ಈ ಮನುಷ್ಯರೇಕೆ ಹೀಗೆ?
ಅವಳು ಕೇಳುತ್ತಾಳೆ
ನಾನು ಕಣ್ಣುತಪ್ಪಿಸುತ್ತೇನೆ
ಪ್ರಶ್ನೆ ಬದಲಿಸುತ್ತಾಳೆ



ಹೋಗಲಿ,ಎದೆಯೊಳಗಿಟ್ಟು
ಆರಾಧಿಸುವ ಅವನು?
ಅವನೇ ನಾನೆಂದು ಭಾವಿಸಿದ್ದೇನೆ
ಬೇಕೆಂದೇ ದೂರ ಸರಿಯುತ್ತಿದ್ದಾನೆ
ಕಾಳಜಿ, ಪ್ರೀತಿ ತಿಳಿಸಿದ್ದೇನೆ
ಕಟ್ಟಕಡೆಯದಾಗಿ ಬೇಡಿದ್ದೇನೆ...
ಗಂಟಲು ಕಟ್ಟಿ
ಕಣ್ಣು ನೀರಾಗುತ್ತವೆ.
ತಲೆ ಸವರಿ ಅವಳದೇ
ಬ್ಯಾಗಿನಿಂದ ಕರವಸ್ತ್ರ ಎತ್ತಿಕೊಡುತ್ತೇನೆ
ಭುಜಕ್ಕೆ ಒರಗುತ್ತಾಳೆ
ಇಲ್ಲ
ನಾನು ಬದುಕಲಾರೆ
ಸತ್ತುಬಿಡಬೇಕೆನಿಸುತ್ತದೆ....
ಎಷ್ಟು ಸಸಾರ ನಾನೆಂದರೆ
ಮನೆಮಂದಿಗೆ!?
ಸೇವೆ ಮಾಡಿ ದಣಿದಿದ್ದೇನೆ
ಅವರವರ ಲೋಕದಲ್ಲಿ ಮಗ್ನರು
ಗಂಡ ಹೇಗೂ....
ಮಕ್ಕಳೂ!
ನಿನಗೆ ನಡುವಯಸ್ಸಿನ ಡಿಪ್ರೆಶನ್‌ಎಂ
ದೇನೋ ತೊದಲುತ್ತೇನೆ
'ನೀನೂ ಇಷ್ಟೇ'
ಬೊಗಸೆಯಲ್ಲಿ ಬಿಕ್ಕುತ್ತಾಳೆ
ನಾನು ನೆಲ ನೋಡುತ್ತೇನೆ!